ರಾಷ್ಟ್ರೀಯ ವಂಶವಾಹಿ ನಿಧಿಯನ್ನು (National Gene Fund) ನಿಗದಿಪಡಿಸಿದ ರೀತಿಯಲ್ಲಿ ಈ ಕೆಳಗೆ ತಿಳಿಸಿದ ಉದ್ದೇಶಗಳಿಗಾಗಿ ಉಪಯೋಗಿಸಬಹುದು.

* ಪರಿಚ್ಛೇದ – 26 ರ ಉಪ ಪರಿಚ್ಛೇದ (5) ರ ಅನ್ವಯ ನೀಡಬೇಕಾದ ಲಾಭಾಂಶ ಹಂಚಿಕೆಯ ಮೊತ್ತ.
* ಪರಿಚ್ಛೇದ – 41 ರ ಉಪ ಪರಿಚ್ಛೇದ (3) ರ ಅನ್ವಯ ನೀಡಬೇಕಾದ ಪರಿಹಾರದ ಮೊತ್ತ.
* ಸಸ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಅದರ ಬಳಕೆ ಮಾಡಲು ಭರಿಸಬೇಕಾಧ ವೆಚ್ಚ ಮತ್ತು ಪಂಚಾಯತ್ ಸಂಸ್ಥೆಗಳು ಇಂತಹ ಸಂರಕ್ಷಣೆ ಕಾರ್ಯಗಳನ್ನು ವಹಿಸಲು ಹೆಚ್ಚು ಸಮರ್ಥಿತವಾಗಲು ವಂಶವಾಹಿ ನಿಧಿಯ ಹಣವನ್ನು ಬಳಸಬಹುದಾಗಿದೆ.

**ಲಾಭಾಂಶ ಹಂಚಿಕೆ (Benefit Sharing)**

ಲಾಭಾಂಶ ಹಂಚಿಕೆ ತಳಿಗೆ ಸಂಬಂಧಪಟ್ಟಿದ್ದು, ಪರಿಚ್ಛೇಧ–26 ರನ್ವಯ ಒಂದು ತಳಿ ನೊಂದಣೆಯಾದಾಗ ಅದರ ಬೀಜ ಮಾರಾಟದಿಂದ ಬರುವ ಲಾಭವನ್ನು ತಳಿ–ವಿಜ್ಞಾನಿ ಅಥವಾ ಪರವಾನಿಗೆ ಪಡೆದ ವ್ಯಕ್ತಿ ಅಥವಾ ರೈತ, ರೈತ ಸಮುದಾಯ ಹಂಚಿಕೊಳ್ಳುತ್ತದೆ. ಲಾಭಾಂಶದ ಹಂಚಿಕೆಯನ್ನು ಪ್ರಾಧಿಕಾರ ನಿರ್ಣಯಿಸುತ್ತದೆ.

**ಸಮುದಾಯ ಹಕ್ಕುಗಳು (Community Rights)**

ಕೃಷಿಯಲ್ಲಿ ಸಕ್ರಿಯವಾಗಿ ತೊಡಗಿರುವ ಅಥವಾ ತೊಡಗಿರದ ಯಾವುದೇ ವ್ಯಕ್ತಿ ಅಥವಾ ಸಮೂಹ ಯಾವುದೇ ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳು ತಳ ಅಭಿವೃದ್ಧಿಗೆ ನೀಡಿರುವ ಕೊಡುಗೆಗೆ ಸಲ್ಲಿಸಬೇಕಾದ ಪುರಸ್ಕಾರಗಳನ್ನು ಕೋರಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಒಡಂಬಡಿಕೆ ರಾಷ್ಟ್ರಗಳು (Convention Countries)**

ಸಸ್ಯ ತಳಿ ಸಂಬಂಧಿತ ವಿಷಯಗಳ ಕುರಿತಂತೆ ಸಾಮಾನ್ಯ ವಿಷಯಗಳ ಮೇಲೆ ಹಲವಾರು ದೇಶಗಳು ಸೇರಿ ಒಂದು ಸಾಮಾನ್ಯ ಒಪ್ಪಂದಕ್ಕೆ ಸಹಿ ಹಾಕುತ್ತವೆ. ಇಂತಹ ಒಪ್ಪಂದಕ್ಕೆ ಸಹಿ ಹಾಕಿ ತೆಗೆದುಕೊಳ್ಳುವ ನಿರ್ಧಾರಗಳಿಗೆ ಬದ್ಧರಾಗಿರಬೇಕಾದ ರಾಷ್ಟ್ರಗಳನ್ನು ಒಡಂಬಡಿಕೆಯ ರಾಷ್ಟ್ರಗಳೆಂದು ಪರಿಗಣಿಸಲಾಗುತ್ತದೆ.

ಸಸ್ಯ ತಳಿ ರಕ್ಷಣೆಯ ಮೇಲ್ಮನವಿ ನ್ಯಾಯಪೀಠ (Plant Varieties Protection Appellate Tribunal)

ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆಯನ್ವಯ ಸಸ್ಯ ತಳಿ ರಕ್ಷಣೆಯ ಮೇಲ್ಮನವಿ ನ್ಯಾಯಪೀಠ ಸ್ಥಾಪಿತವಾಗಿದೆ. ಪ್ರಾಧಿಕಾರದ ರಿಜಿಸ್ಟ್ರಾರ ಹೊರಡಿಸುವ ತಳಿ ನೊಂದಣಿಗೆ ಸಂಬಂಧಿಸಿದ ಆದೇಶಗಳನ್ನು ಅರ್ಥೈಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ನ್ಯಾಯಪೀಠ ಮುಖ್ಯ ಪಾತ್ರ ವಹಿಸುತ್ತದೆ.

**ನೊಂದಣಿ**

ಸಸ್ಯ ತಳಿ ಸಂರಕ್ಷಣೆ ಹಾಗೂ ರೈತರ ಹಕ್ಕೆಗಳ ಕಾಯ್ದೆ 2001 ರನ್ವಯ ಒಂದು ತಳಿ ಬೀಜಗಳನ್ನು ನೊಂದಣಿ ಮಾಡಲು ಅಂತಹ ತಳಿಯು DUS ಪರೀಕ್ಷೆಗೆ ಒಳಪಟ್ಟಿರಬೇಕಾಗಿರುವುದು ಕನಿಷ್ಟ ಅರ್ಹತೆಯಾಗಿರುತ್ತದೆ. ಕೇಂದ್ರ ಸರ್ಕಾರವು ನೊಂದಣಿಗೆ ಒಳಪಡಬೇಕಾದ ತಳಿಗಳ ವಿಶೇಷತೆ ಹಾಗೂ ದಾಖಲಾತಿಯ ಉದ್ದೇಶದ ಔಚಿತ್ಯದ ಬಗ್ಗೆ ಗೆಜೆಟ್‌ನಲ್ಲಿ ಅಧಿಸೂಚಿಯನ್ನು ಹೊರಡಿಸುತ್ತದೆ. ಪ್ರಾಧಿಕಾರವು ವಿವಿಧ ಬೆಳೆಗಳಾದ ಗೋಧಿ, ಭತ್ತ, ಮುಸುಕಿನಜೋಳ, ಜೋಳ, ಸಜ್ಜೆ, ಕಡಲೆ, ತೊಗರಿ, ಹೆಸರು, ವಟಾಣಿ, ಉದ್ದು, ಬೀನ್ಸ್, ಚನ್ನಂಗಿ, ಹತ್ತಿ, ಕಬ್ಬು, ಶುಂಠಿ, ಅರಿಷಿಣ, ಸಾಸಿವೆ, ಸೂರ್ಯಕಾಂತಿ, ಕುಸುಬೆ, ಔಡಲ, ಎಳ್ಳು, ಅಗಸೆ, ಶೇಂಗಾ, ಸೋಯಾ ಅವರೆ, ಏಲಕ್ಕಿ, ಗುಲಾಬಿ, ಸೇವಂತಿಗೆ, ಮಾವು, ಆಲೂಗಡ್ಡೆ, ಬದನೆ, ಟೊಮ್ಯಾಟೋ, ಬೆಂಡೆಕಾಯಿ, ಹೂಕೋಸು, ಎಲೆಕೋಸು, ಈರುಳ್ಳಿ, ಬೆಳ್ಳುಳ್ಳಿ, ಪುದೀನಾ, ಬ್ರಾಹ್ಮಿ ಮುಂತಾದ ಬೆಳೆಗಳ DUS ಪರೀಕ್ಷೆಯನ್ನು ಕೈಗೊಳ್ಳಲು ಸವಿಸ್ತಾರವಾದ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಿದೆ.

**ನೊಂದಣಿ ಶುಲ್ಕ**

ಸಸ್ಯ ತಳಿಗಳನ್ನು ನೋಂದಣಿ ಮಾಡುವ ಸಮಯದಲ್ಲಿ ಪ್ರಾಧಿಕಾರವು ಸೂಚಿಸಿರುವ ಶುಲ್ಕದ ದರನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

| ಕ್ರ.ಸಂ. | ತಳಿಯ ವಿಧ | ದರ (ರೂ.ಗಳಲ್ಲಿ) | |
|---|---|---|---|
| 1 | **ಬೀಜ ಕಾಯ್ದೆ 1966 ಪರಿಚ್ಛೇದ 5ರ ಅನ್ವಯ ಅಧಿಸೂಚಿಸಿದ ಚಾಲ್ತಿಯಲ್ಲಿರುವ ತಳಿಗಳು** | | **ರೂ. 1000/–** |
| 2. | ಹೊಸ ತಳಿಗಳು | ವೈಯಕ್ತಿಕ<br>ಶೈಕ್ಷಣಿಕ<br>ವಾಣಿಜ್ಯ | ರೂ. 5000/–<br>ರೂ. 7000/–<br>ರೂ. 10000/– |
| 3. | ಚಾಲ್ತಿಯಲ್ಲಿರುವ ತಳಿಗಳು ಅಥವಾ ತಳಿಯ ಬಗ್ಗೆ ಜನರಿಗೆ ಸಾಮಾನ್ಯ ಜ್ಞಾನವಿರುವ ತಳಿಗಳು | ವೈಯಕ್ತಿಕ<br>ಶೈಕ್ಷಣಿಕ<br>ವಾಣಿಜ್ಯ | ರೂ. 5000/–<br>ರೂ. 7000/–<br>ರೂ. 10000/– |

ನೊಂದಣಿಯ ಕಾಲಾವಧಿ ಮುಗಿದ ನಂತರ ಸ್ವಯಂ ತಳಿಯ ಮೇಲಿನ ಮಾಲೀಕತ್ವ ಅಂತ್ಯಗೊಳ್ಳುತ್ತದೆ. ಹಾಗೂ ತಳಿಯು ಸಾರ್ವಜನಿಕ ಸ್ವತ್ತಾಗಿ ಪರಿವರ್ತನೆ ಆಗುತ್ತದೆ. ನಿಗದಿತ ಕಾಲಾವಧಿಯಲ್ಲಿ ವಾರ್ಷಿಕ ನೊಂದಣಿ ನವೀಕರಣ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

**DUS ಪರೀಕ್ಷಾ ಕೇಂದ್ರಗಳು**

ತಳಿಯ ನೊಂದಣಿಗೆ ಅವಶ್ಯಕವಾದ ವಿಶೇಷ ಗುಣಲಕ್ಷಣಗಳನ್ನು ಖಚಿತಪಡಿಸಲು ಪರೀಕ್ಷೆಗೆ ಅಣು ಪರೀಕ್ಷೆ ಎನ್ನುತ್ತಾರೆ. ಪ್ರಾಧಿಕರಾವು ದೇಶದ್ಯಾಂತ 52 DUS ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿದೆ. ಈ ಕೇಂದ್ರಗಳಿಗೆ ವಿವಿಧ ಬೆಳೆಗಳ ತಳಿಗಳ ವಿಭಿನ್ನತೆ, ಏಕರೂಪತೆ ಹಾಗೂ ದೃಢತೆಯ ಪರೀಕ್ಷೆಗಳನ್ನು ಮಾಡುವ ಜವಾಬ್ದಾರಿಯನ್ನು ವಹಿಸಲಾಗುತ್ತಿದೆ. ಇದಲ್ಲದೇ ವಿವಿಧ ಬೆಳೆಗಳ ಉದಾಹರಣೆ ತಳಿಗಳು ಹಾಗೂ ಪ್ರಸ್ತಾಪಿಸಿದ (Reference) ತಳಿಗಳ ವಿಶೇಷ ಗುಣಗಳನ್ನು ದಾಖಲೆ ಮಾಡುವುದು ಹಾಗೂ ವಂಶಾಭಿವೃದ್ಧಿ ಮಾಡುವುದನ್ನು ಈ ಕೇಂದ್ರಗಳು ನಿರ್ವಹಿಸುತ್ತವೆ.

**ಲೇಖಕರು**

ಡಾ.ಎಸ್.ಎಂ.ಹಿರೇಮಠ, ಡಾ.ಕೆ.ಪಿ.ಗುಂಡಣ್ಣವರ, ಡಾ.ಸಿ.ಜೆ.ಕುಮಾರ

ಹಾಗೂ ಡಾ. ಉಮಾ ಕುಲಕರ್ಣಿ

**ಸಂಪಾದಕರು ಹಾಗೂ ಪ್ರಕಾಶಕರು**

ಡಾ. ಎಸ್.ಎಂ.ಮಂಟೂರ, ಕಾರ್ಯಕ್ರಮ ಸಂಯೋಜಕರು

ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

**ಅಕ್ಷರ ಜೋಡಣೆ ಮತ್ತು ವಿನ್ಯಾಸ**

ಶ್ರೀಮತಿ ಶೈಲಜಾ ಗಲಗಲಿ & ಶ್ರೀ ಸಂತೋಷ ಕುಂಬಾರ

**ಆರ್ಥಿಕ ಸಹಾಯ**

ಸ ತ ರ ಹಾಗೂ ರೈ ಹಳ್ಳಿಗಳ ಪೋಷಕರ ಹಾಗೂ

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ್, ಕೃಷಿ ವಿಶ್ವವಿದ್ಯಾಲಯ, ಧಾರವಾಡ**

**ಪೊ** : 0836–2444272 **ಮಿಂಚಂಚೆ** : pc_kvkd@rediffmail.com, web : www.kvkdharwad.org

# ಕೃಷಿ ವಿಶ್ವವಿದ್ಯಾಲಯ, ಧಾರವಾಡ



## ಸಸ್ಯ ತಳಿ ರಕ್ಷಣೆ ಹಾಗೂ ರೈತರ ಹಕ್ಕುಗಳ ಪ್ರಾಧಿಕಾರದ ಧ್ಯೇಯೋದ್ದೇಶಗಳು ಮತ್ತು ವಿಶೇಷತೆಗಳು

**ಹಸ್ತ ಪತ್ರಿಕೆ ಜನೇವರಿ 2015**

**ಕೃಷಿ ವಿಜ್ಞಾನ ಕೇಂದ್ರ**

**ಸೈದಾಪೂರ ಫಾರ್ಮ್, ಧಾರವಾಡ**

## ಸಸ್ಯ ತಳಿ ರಕ್ಷಣೆ ಹಾಗೂ ರೈತರ ಹಕ್ಕುಗಳ ಪ್ರಾಧಿಕಾರದ ಧ್ಯೇಯೋದ್ದೇಶಗಳು ಮತ್ತು ವಿಶೇಷತೆಗಳು

ಸಸ್ಯ ತಳಿಗಳನ್ನು ಹಾಗೂ ರೈತರ ಮತ್ತು ತಳಿವರ್ಧಕರ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಮತ್ತು ನವೀನ ಸಸ್ಯ ತಳಿಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು, ಭಾರತ ಸರ್ಕಾರವು 2001 ನೇ ಸಾಲಿನಲ್ಲಿ ಸಸ್ಯತಳಿ ಅಭಿವೃದ್ಧಿ ಹಾಗೂ ರೈತರ ಹಕ್ಕುಗಳ ಕಾಯ್ದೆಯನ್ನು ಜಾರಿಗೊಳಿಸಿತು. ಈ ಕಾಯ್ದೆಯನ್ನು ಅಂತರಾಷ್ಟ್ರೀಯ ಹೊಸ ಸಸ್ಯ ತಳಿಗಳ ರಕ್ಷಣಾ ಒಕ್ಕೂಟ (UPOV-Union for the Protection of Varieties of Plant) ನಿಯಮಗಳ ಅನುಸಾರ, ಅನುಷ್ಟಾನಗೊಳಿಸಲಾಗಿದ್ದು, ರೈತರ ಹಾಗೂ ಸಾರ್ವಜನಿಕ ವಲಯದ ತಳಿ ಅಭಿವೃದ್ಧಿಕರ ಹಿತರಕ್ಷಣೆಯನ್ನು ಕಾಪಾಡಲಾಗುವುದು. ಇದಲ್ಲದೇ ಈ ಕಾಯ್ದೆಯು ತಳಿ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡ ರೈತರು ಹಾಗೂ ಬೀಜ ವಾಣಿಜ್ಯೋದ್ಯಮದಲ್ಲಿ ತೊಡಗಿಸಿಕೊಂಡ ತಳಿವರ್ಧಕರ ಕೊಡುಗೆಗಳನ್ನು ಗುರುತಿಸಿ, ಅವರೆಲ್ಲರ ಆರ್ಥಿಕ ಹಾಗೂ ಸಾರ್ವಜನಿಕ ಹಿತಾಸಕ್ತಿಗಳನ್ನು ಕಾಪಾಡುವ ದಿಶೆಯತ್ತ ರೂಪಿಸಲ್ಪಟ್ಟಿದೆ.

ಪ್ರಾಧಿಕಾರಕ್ಕೆ ಒಬ್ಬ ಅಧ್ಯಕ್ಷರಿದ್ದು, ಇತರ 15 ಸದಸ್ಯರಿರುತ್ತಾರೆ. ಪ್ರಾಧಿಕಾರದ ಅಧ್ಯಕ್ಷರನ್ನು ಕೇಂದ್ರ ಸರ್ಕಾರ ನೇಮಕ ಮಾಡುವುದು. ನೇಮಕವಾಗುವ ವ್ಯಕ್ತಿಯು ಸಸ್ಯ ತಳಿಗಳ ಅಭಿವೃದ್ಧಿ ಸಂಶೋಧನೆಯಲ್ಲಿ ಅಥವಾ ಕೃಷಿ ಅಭಿವೃದ್ಧಿಯಲ್ಲಿ ದೀರ್ಘ ಅನುಭವವನ್ನು ಹೊಂದಿರಬೇಕು. ಕೇಂದ್ರ ಸರ್ಕಾರಕ್ಕೆ ಇಂತಹ ವ್ಯಕ್ತಿಯ ಅರ್ಹತೆಯ ಬಗ್ಗೆ ತೃಪ್ತಿ ಇರಬೇಕು. ಪ್ರಾಧಿಕಾರದ ಇತರ ಸದಸ್ಯರನ್ನು ಕೇಂದ್ರ ಸರ್ಕಾರವು ನೇಮಿಸಲಿದ್ದು ಪ್ರಾಧಿಕಾರದ ಸದಸ್ಯರ ಸಂಯೋಜನೆ ಈ ಕೆಳಗಿನಂತಿದೆ.

ಈ ಕಾಯ್ದೆಯನ್ನು ಅನುಷ್ಠಾನಗೊಳಿಸಲು, ಕೃಷಿ ಮತ್ತು ಸಹಕಾರ ಇಲಾಖೆ, ಕೃಷಿ ಮಂತ್ರಾಲಯವು ನವೆಂಬರ 11, 2005 ರಂದು ಸಸ್ಯ ತಳಿ ಅಭಿವೃದ್ಧಿ ಮತ್ತು ರೈತರ ಹಕ್ಕುಗಳ ಪ್ರಾಧಿಕಾರವನ್ನು ಸ್ಥಾಪಿಸಿತು. ಈ ಪ್ರಾಧಿಕಾರದ ಅಧ್ಯಕ್ಷರು ಮುಖ್ಯ ಕಾರ್ಯ ನಿರ್ವಾಹಕರಾಗಿರುತ್ತಾರೆ, ಭಾರತ ಸರ್ಕಾರದ ಅಧಿಸೂಚನೆಯ ಮೇರೆಗೆ ಅಧ್ಯಕ್ಷರನ್ನು ಹೊರತುಪಡಿಸಿ ಪ್ರಾಧಿಕಾರದಲ್ಲಿ 15 ಸದಸ್ಯರಿರುತ್ತಾರೆ. ಕೇಂದ್ರ ಸರ್ಕಾರದಿಂದ ನಾಮ ನಿರ್ದೇಶನಗೊಂಡ ಎಂಟು ಪದ ನಿಮಿತ್ತ ಸದಸ್ಯರು ವಿವಿಧ ಇಲಾಖೆಗಳಿಂದ ನಾಮನಿರ್ದೇಶನಗೊಂಡಿರುತ್ತಾರೆ. ಒಬ್ಬ ಸದಸ್ಯರು ರಾಷ್ಟ್ರ/ರಾಜ್ಯ ಮಟ್ಟದ ರೈತ ಸಂಘ/ಸಂಸ್ಥೆಯ ಪ್ರತಿನಿಧಿ, ಇತರ ಸಂಘ ಸಂಸ್ಥೆಗಳನ್ನು ಪ್ರತಿನಿಧಿಸುವ ಹಾಗೂ ಭಾರತ ಸರ್ಕಾರದಿಂದ ಸೀಮಿತವಾಗುವ ಸದಸ್ಯರುಗಳೆಂದರೆ, ಒಬ್ಬ ಸದಸ್ಯರು ಬುಡಕಟ್ಟು ಜನಾಂಗದ ಪ್ರತಿನಿಧಿಯಾಗಿ ಒಬ್ಬ ಸದಸ್ಯರು ಕೃಷಿ ವಿಶ್ವವಿದ್ಯಾಲಯ ಪ್ರತಿನಿಧಿಯಾಗಿದ್ದು, ಕೃಷಿ ಚಟುವಟಿಕೆಗಳಲ್ಲಿ ತೊಡಗಿರಬೇಕು. ಇಬ್ಬರು ಸದಸ್ಯರನ್ನು ರಾಜ್ಯ ಸರ್ಕಾರಗಳ ಪ್ರತಿನಿಧಿಯಾಗಿ ಪರಿವರ್ತಿತ ಆಧಾರದ ಮೇಲೆ ಕೇಂದ್ರ ಸರ್ಕಾರವು ನೇಮಿಸುತ್ತದೆ. ರಿಜಿಸ್ಟ್ರರ್ ಜನರಲ್‌ರವರು ಪ್ರಾಧಿಕಾರದ ಪದ ನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಪ್ರಾಧಿಕಾರ ಅವಧಿಯು ಸರ್ಕಾರ ಹೊರಡಿಸುವ ಆದೇಶದಂತೆ ಇರುತ್ತದೆ. ಐದು ಸದಸ್ಯರನ್ನೊಳಗೊಂಡ ಸ್ಥಾಯಿ ಸಮಿತಿಯನ್ನು ಪ್ರಾಧಿಕಾರದ ಅಧ್ಯಕ್ಷರು ನೇಮಕ ಮಾಡಬಹುದಾಗಿದ್ದು, ಪ್ರಾಧಿಕಾರಕ್ಕೆ ರೈತರ ಹಕ್ಕುಗಳು ಹಾಗೂ ಇತರ ವಿಷಯಗಳಲ್ಲಿ ಸಲಹೆ ನೀಡುವರು.

### ಸಸ್ಯ ತಳಿ ರಕ್ಷಣೆ ಹಾಗೂ ರೈತರ ಅಭಿವೃದ್ಧಿ ಪ್ರಾಧಿಕಾರದ ಧ್ಯೇಯೋದ್ದೇಶಗಳು

1. ಸಸ್ಯ ತಳಿಗಳನ್ನು ಹಾಗೂ ರೈತರ ಮತ್ತು ತಳಿವರ್ಧಕರ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ಮತ್ತು ಹೊಸ ಸಸ್ಯ ತಳಿಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯನ್ನು ಪ್ರೋತ್ಸಾಹಿಸಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದು.

2. ಸಸ್ಯ ತಳಿ ಸಂಪತ್ತನ್ನು ರಕ್ಷಿಸಲು ಹಾಗೂ ಹೊಸ ಸಸ್ಯ ತಳಿಗಳನ್ನು ಅಭಿವೃದ್ಧಿ ಪಡಿಸಲು ಸಹಕರಿಸುವ ಎಲ್ಲ ರೈತರನ್ನು ಗುರುತಿಸಿ ಅವರ ಹಕ್ಕುಗಳನ್ನು ರಕ್ಷಿಸುವುದು.

3. ಸಾರ್ವಜನಿಕ ಹಾಗೂ ಖಾಸಗಿ ಕೃಷಿವಲಯಗಳಲ್ಲಿ ಕ್ಷಿಪ್ರ ಪ್ರಗತಿಯನ್ನು ಸಾಧಿಸುವುದು, ಸಸ್ಯ ತಳಿವರ್ಧಕರ ಹಕ್ಕುಗಳನ್ನು ರಕ್ಷಿಸುವುದು, ಸಂಶೋಧನೆ ಮತ್ತು ಅಭಿವೃದ್ಧಿಯ ಪಥದಲ್ಲಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಿ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸಲು ಸಹಕಾರ ನೀಡುವುದು.

4.ದೇಶದಲ್ಲಿ ಬೀಜೋದ್ಯಮದ ಬೆಳವಣಿಗೆಗೆ ಸಹಕರಿಸಿ, ಉತ್ಕೃಷ್ಟ ಬೀಜ ಹಾಗೂ ಸಸಿಗಳನ್ನು ಸೂಕ್ತ ಸಮಯದಲ್ಲಿ ಒದಗಿಸುವುದು.

### ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು

* ಹೊಸ ತಳಿಗಳನ್ನು ಅವಶ್ಯಕವಾಗಿ ಉತ್ಪತ್ತಿಯಾದ ತಳಿಗಳನ್ನು (Essentially Driy) ಹಾಗೂ ಚಾಲ್ತಿಯಲ್ಲಿರುವ ತಳಿಗಳನ್ನು ನೊಂದಾಯಿಸುವುದು.
* ಹೊಸ ತಳಿಗಳಿಗೆ DUS (ವಿಭಿನ್ನತೆ, ಏಕರೂಪತೆ, ಹಾಗೂ ದೃಢತೆಯ ಮಾರ್ಗಸೂಚಿಗಳನ್ನು ಅಭಿವೃದ್ಧಿ ಪಡಿಸುವುದು.
* ನೊಂದಾಯಿತ ತಳಿಗಳಿಗೆ ಗುಣ ವಿಶೇಷಣಗಳನ್ನು ದಾಖಲಿಸುವುದು.
* ಆರ್ಥಿಕ ಬೆಳೆಗಳ ಸಸ್ಯ ತಳಿ ಸಂಪತ್ತನ್ನು ರಕ್ಷಿಸಲು ಶ್ರಮಿಸುತ್ತಿರುವ ರೈತರು ವಿಶೇಷವಾಗಿ ಪರಿಶಿಷ್ಟ ಪಂಗಡಕ್ಕೆ ಸೇರಿದ ರೈತರ ಸಮುದಾಯಗಳ ಕೊಡುಗೆಯನ್ನು ಗುರುತಿಸಿ ಸನ್ಮಾನಿಸುವುದು.
* ರಾಷ್ಟ್ರೀಯ ವಂಶವಾಹಿ ನಿಧಿಯನ್ನು ನಿರ್ವಹಿಸುವುದು.
* ಸಸ್ಯ ತಳಿಗಳ ರಾಷ್ಟ್ರೀಯ ದಾಖಲೆಗಳನ್ನು ನಿರ್ವಹಣೆ ಮಾಡುವುದು.

### ಕಾಯ್ದೆಯ ಅಡಿಯಲ್ಲಿರುವ ಹಕ್ಕುಗಳು

**1. ತಳಿವರ್ಧಕರ ಹಕ್ಕುಗಳು**

ತಳಿವರ್ಧಕರು ಸಂರಕ್ಷಿತ ತಳಿಗಳನ್ನು ಉತ್ಪಾದಿಸಲು, ಮಾರಾಟ ಮಾಡಲು, ಹಂಚಲು, ಆಮದು–ರಫ್ತು ಮಾಡಲು ಸಂಪೂರ್ಣವಾದ ಹಕ್ಕನ್ನು ಹೊಂದಿರುತ್ತಾರೆ.

**2. ಸಂಶೋಧಕರ ಹಕ್ಕುಗಳು**

ಸಂಶೋಧಕರು ನೊಂದಾಯಿತ ತಳಿಗಳನ್ನು ಸಂಶೋಧನೆಯ ಉದ್ದೇಶಕ್ಕಾಗಿ ಹಾಗೂ ತಳಿ ಅಭಿವೃದ್ಧಿಯ ಉದ್ದೇಶಕ್ಕಾಗಿ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ ಮೇಲಿಂದ ಮೇಲೆ ಈ ನೊಂದಾಯಿತ ತಳಿಗಳನ್ನು ಉಪಯೋಗಿಸುವುದಾದರೆ ನೊಂದಾಯಿತ ತಳಿವರ್ಧಕರ ಪೂರ್ವಾನುಮತಿಯನ್ನು ಪಡೆಯಬೇಕಾಗುತ್ತದೆ.

**3. ರೈತರ ಹಕ್ಕುಗಳು**

* ಯಾವುದೇ ರೈತ ಒಂದು ಹೊಸ ತಳಿಯನ್ನು ಅಭಿವೃದ್ಧಿಪಡಿಸಿದರೆ, ಆ ರೈತ ತಳಿ ನೊಂದಣಿ ಮಾಡಲು ಹಾಗೂ ತಳಿ ವಿಜ್ಞಾನಿಗೆ ಇರುವಂತೆ ಇತರ ವಿಷಯಗಳಿ ಮೇಲಿರುವ ಹಕ್ಕುಗಳನ್ನು ಪಡೆಯಲು ಅರ್ಹನಾಗಿರುತ್ತಾನೆ.
* ಯಾವುದೇ ರೈತ ನಾಡ ತಳಿಗಳ ಮತ್ತು/ ಅಥವಾ ಕಾಡು ಜಾತಿ ಸಸ್ಯ ತಳಿಗಳ ಸಂರಕ್ಷಣೆಯಲ್ಲಿ ತೊಡಗಿದರೆ, ಅಂತಹ ರೈತನ ಕೊಡುಗೆಗಳನ್ನು ಗುರುತಿಸಿ ವಂಶವಾಹಿನಿ ನಿಧಿಯಿಂದ ನೊಂದಣಿಯು ತಳಿಯ ಅಭಿವೃದ್ಧಿಯಲ್ಲಿ ರೈತ ಸಂರಕ್ಷಿಸುವ ತಳಿಗಳ ವಂಶಾಣು ಮೂಲವನ್ನಾಗಿ ಉಪಯೋಗಿಸಬೇಕು.
* ರೈತರು ಯಾವುದೇ ತಳಿಯ ಬೀಜವನ್ನು (ನೊಂದಣಿಸಿದ ತಳಿಯ ಬೀಜವನ್ನೂ ಸೇರಿಸಿ) ಬಿತ್ತನೆಗಾಗಿ ತನ್ನ ಉಪಯೋಗಕ್ಕಾಗಿ, ಇತರರೊಡನೆ ಹಂಚಿಕೊಳ್ಳುವುದಕ್ಕಾಗಿ ಅಥವಾ ವಿನಿಮಯ ಮಾಡುವುದಕ್ಕಾಗಿ ಉಪಯೋಗಿಸಬಹುದು, ಇತರರೊಡನೆ ಹಂಚಿಕೊಳ್ಳುವದಕ್ಕಾಗಿ ಅಥವಾ ವಿನಿಮಯ ಮಾಡುವುದಕ್ಕಾಗಿ ಉಪಯೋಗಿಸಬಹುದು. ಆದರೆ ರಕ್ಷಿತ ತಳಿಯ ಬೀಜವನ್ನು ಬ್ರ್ಯಾಂಡ್ ಮಾಡಿ ಮಾರಾಟ ಮಾಡುವಂತಿಲ್ಲ.

### ಭಾರತೀಯ ಸಸ್ಯ ತಳಿ ಪತ್ರಿಕೆ (Plant Variety Journal of India)

ಪ್ರಾಧಿಕಾರವು ಭಾರತೀಯ ಸಸ್ಯ ತಳಿ ಪತ್ರಿಕೆ (Plant Variety Journal of India) ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟ ಮಾಡುತ್ತಿದೆ. ಈ ಪತ್ರಿಕೆ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆಯ ಅಧಿಕೃತ ಗೆಜೆಟ್ ಮಾದರಿಯಲ್ಲಿದ್ದು. ನೊಂದಾಯಿತ ತಳಿಗಳ ಬಗ್ಗೆ ಹಾಗೂ ಆಗಾಗ್ಗೆ ಪ್ರಕಟವಾಗುವ ಸರ್ಕಾರದ ಹಾಗೂ ಪ್ರಾಧಿಕಾರದ ಆದೇಶ ಮತ್ತು ಸಾರ್ವಜನಿಕ ಸೂಚನೆಗಳು, ಸಸ್ಯ ತಳಿಗಳ ಪಾಸ್‌ಪೋರ್ಟ ಮಾಹಿತಿ ವಿವಿಧ ಬೆಳೆಗಳ ಮಾರ್ಗಸೂಚಿ, ನೊಂದಣಿ ದೃಢೀಕರಣ ಪತ್ರ ಹಾಗೂ ಇತರೆ ಸಂಬಂಧಿಸಿದ ವಿಷಯಗಳ ಬಗ್ಗೆ ಪ್ರಕಟಣೆಗಳನ್ನು ಒಳಗೊಂಡಿರುತ್ತದೆ.

### ನೊಂದಣಿ ದೃಢೀಕರಣ ಪತ್ರ (Certificate of Registration)

ತಳಿ ನೊಂದಣಿ ಪ್ರಕ್ರಿಯೆಯು ನಂತರ ರಿಜಿಸ್ಟ್ರಾರರವರು ನಿಗದಿತ ರೂಪದಲ್ಲಿ ರಿಜಿಸ್ಟ್ರಿಯ ಮುದ್ರೆಯೊಂದಿಗೆ ನೋಂದಣಿದಾರರಿಗೆ ನೊಂದಣಿ ದೃಢೀಕರಣ ಪತ್ರವನ್ನು ನೀಡುತ್ತಾರೆ. ಇಲ್ಲಿಯವರೆಗೆ 294 ದೃಢೀಕರಣ ಪತ್ರಗಳನ್ನು ನೀಡಲಾಗಿದೆ. ಇವುಗಳಲ್ಲಿ 6 ಹೊಸ ತಳಿಗಳು, 285 ಚಾಲ್ತಿಯಲ್ಲಿರುವ ತಳಿಗಳು ಹಾಗೂ 3 ರೈತರ ತಳಿಗಳು ಸೇರ್ಪಡೆಯಾಗಿವೆ. ಈ ದೃಢೀಕರಣ ಪತ್ರದ ಅವಧಿ ಬಹುವಾರ್ಷಿಕ ಮರದ ಜಾತಿಗೆ ಸೇರಿದ ಬೆಳೆಗಳಿಗೆ 9 ವರ್ಷ ಹಾಗೂ ವಾರ್ಷಿಕ ಬೆಳೆಗಳಾದ ಭತ್ತ, ಗೋಧಿ, ಕಬ್ಬು, ಆಲೂಗಡ್ಡೆ, ರಾಗಿ, ಬದನೆ ಇತ್ಯಾದಿಗಳಿಗೆ 6 ವರ್ಷಗಳಿದ್ದು, ನಿಗದಿತ ಪೂರ್ಣಾವಧಿ ಮುಗಿದ ನಂತರ ತಳಿಯ ಮೇಲಿನ ಮಾಲೀಕತ್ವ ಅಂತ್ಯವಾಗುವುದು.

### ರಾಷ್ಟ್ರೀಯ ಸಸ್ಯ ತಳಿಗಳ ರಿಜಿಸ್ಟರ್ (National Register of Plant Varieties)

ಕಾಯ್ದೆಯನ್ವಯ ಸಸ್ಯ ತಳಿ ದಾಖಲಾತಿಗೆ ನಿರ್ಮಿತವಾದ ರಜಿಸ್ಟ್ರಿಯ ಮುಖ್ಯ ಕಚೇರಿಯಲ್ಲಿ ರಾಷ್ಟ್ರೀಯ ಸಸ್ಯ ತಳಿಗಳ ರಿಜಿಸ್ಟರ್‌ನ್ನು ಇಟ್ಟಿರುತ್ತದೆ. ಎಲ್ಲಾ ನೊಂದಾಯಿತ ಸಸ್ಯ ತಳಿಗಳ ವಿವರ, ತಳಿವರ್ಧಕ ಹೆಸರು ಹಾಗೂ ವಿಳಾಸವನ್ನು ಈ ರಿಜಿಸ್ಟರ್ ಒಳಗೊಂಡಿರುತ್ತದೆ. ಈ ದಾಖಲಾತಿಯಿಂದ ಬೇರೆಯವರು ನಮ್ಮ ರೈತರ ತಳಿಗಳ ಮೇಲೆ ಮಾಲೀಕತ್ವ ಪಡೆಯುವ ಸಾಧ್ಯತೆಯನ್ನು ತಪ್ಪಿಸಬಹುದಾಗಿದೆ. ಅನಧಿಕೃತವಾಗಿ ಪಡೆದಿರುವ ತಳಿ ಮಾಲೀಕತ್ವದ ಹಕ್ಕನ್ನು ರಿಜಿಸ್ಟ್ರಿಯಲ್ಲಿರುವ ದಾಖಲೆಗಳ ಮಾಹಿತಿಯ ಸಹಾಯದಿಂದ ರದ್ದು ಪಡಿಸಬಹುದಾಗಿದೆ.

### ರಾಷ್ಟ್ರೀಯ ವಂಶವಾಹಿ ನಿಧಿ (National Gene Fund)

ಕೇಂದ್ರ ಸರ್ಕಾರವು ಕಾಯಿದೆ ಅನ್ವಯ, ಒಂದು ನಿಧಿಯನ್ನು ಸ್ಥಾಪಿಸಿದ್ದು, ಇದಕ್ಕೆ ರಾಷ್ಟ್ರೀಯ ವಂಶವಾಹಿ ನಿಧಿ (ನ್ಯಾಷನಲ್ ಜೀನ್‌ಫಂಡ್) ಎಂದು ಕರೆಯಲಾಗುವುದು. ಇದಕ್ಕೆ ಪಾವತಿ ಮಾಡಬೇಕಾದ ದರಗಳು ಈ ರೀತಿ ಇವೆ. ಕಾಯಿದೆಯ ಅನ್ವಯ ನೊಂದಣಿಸಿದ ತಳಿಯಿಂದ ಅಥವಾ ಅವಶ್ಯಕವಾಗಿ ಉತ್ಪತ್ತಿಯಾದ ತಳಿಯಿಂದ ಅಥವಾ ಈ ತಳಿಗಳ ಬೀಜದಿಂದ ತಳಿ ವಿಜ್ಞಾನಿಗೆ ನಿಗದಿ ಪಡಿಸಿದ ಲಾಭಾಂಶ ಹಂಚಿಕೆಯಿಂದ ಬರುವ ಹಣ.

ಪರಿಚ್ಛೇದ –35 ರ ಉಪಚ್ಛೇದ (1) ರಲ್ಲಿ ತಿಳಿಸಿರುವಂತೆ ಪ್ರಾಧಿಕಾರಕ್ಕೆ ಪಾವತಿಯಾಗುವ ವಾರ್ಷಿಕ ಶುಲ್ಕದ ಹಣ (by way of royalty)

ಪರಿಚ್ಛೇದ–41 ರ ಉಪಪರಿಚ್ಛೇಧ (4) ರ ಅನ್ವಯ ಜೀನ್ ಫಂಡ್‌ಗೆ ಪಾವತಿಸಬೇಕಾದ ಪರಿಹಾರದ ಮೊತ್ತ.

* ಯಾವುದೇ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಸಂಸ್ಥೆಯಿಂದ ಬರುವ ಕೊಡುಗೆಗಳು.